**ಹಿರಿಯ ಸಿವಿಲ್ ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ**

**ಎಂ.ವಿ.ಸಿ. ಸಂಖ್ಯೆಃ 376 /2021**

**ದಿನಾಂಕಃ 17-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಆರ್ ಡಬ್ಲೂ- | 01 |

**ಮುಖ್ಯ ವಿಚಾರಣೆ : ಎದುರುದಾರರ ಪರ ವಕೀಲರಾದ ಶ್ರೀ RSB ವಕೀಲರಿಂದಃ**

ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನಿಜವಿರುತ್ತದೆ. ಅದಕ್ಕೆ ನನ್ನ ಸಹಿ ಇದ್ದು ಅದು ನನ್ನ ಮಾಹಿತಿ ಪ್ರಕಾರ ಸರಿ ಇರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು : ಅರ್ಜಿದಾರರ ಪರ ವಕೀಲರಾದ ಶ್ರೀ KAH ವಕೀಲರಿಂದ**

1. ಸಾಕ್ಷಿ ಪ್ರಮಾಣದಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಅನ್ನುವುದು ಸರಿಯಲ್ಲ. ಅಪಘಾತ ಕಾಲಕ್ಕೆ ನಾನು ಓಡಿಸಿದ ಮೋಟಾರ್ ಸೈಕಲ್ ನಂ.ಕೆಎ-37/ಇಜೆ-5002 ನನ್ನ ತಂದೆ ಯಮನೂರಪ್ಪರವರ ಹೆಸರಿನಲ್ಲಿ ಇರುತ್ತದೆ. ಈ ಅಪಘಾತದಿಂದಾಗಿ ನನ್ನ ಮೇಲೆ ಕೇಸ್ ದಾಖಲಾಗಿದೆ ಅಂದರೆ ಸರಿ. ನನ್ನದೇ ತಪ್ಪಿನಿಂದ ಅಪಘಾತ ಆಯಿತು ಎಂದು ನನ್ನ ಮೇಲೆ ದೋಷಾರೋಪಣ ಪತ್ರ ಹಾಕಿದ್ದಾರೆ ಅಂದರೆ ಸರಿ. ಈ ಅಪಘಾತ N.H-63 ಬಿ.ಟಿ ಪಾಟೀಲ್ ನಗರ 2 ನೇ ಕ್ರಾಸ್ ಇಲ್ಲಿ ಆಗಿದೆ ಅಂದರೆ ಸರಿಯಲ್ಲ. ರಸ್ತೆ ಡಿವೈಡರ್ ನಿಂದ ಜನ ಬಿ.ಟಿ ಪಾಟೀಲ್ ನಗರಕ್ಕೆ ಹೋಗುತ್ತಾರೆ ಮತ್ತೆ ಬರುತ್ತಾರೆ ಅಂದರೆ ಸರಿ. ನಾನು 100 ಸ್ಪೀಡಿನಲ್ಲಿ ಗಾಡಿ ಓಡಿಸಿದೆ ಅಂದರೆ ಸರಿಯಲ್ಲ. ಅಲ್ಲಿ ನಾನು ಇರಲಿಲ್ಲ ಮತ್ತು ಅದು ನನಗೆ ಗೊತ್ತಿಲ್ಲ.

2. ನಾನು ಲಕ್ಷ್ಮೀ ಥಿಯೇಟರ್ ಕಡೆಯಿಂದ ಸುದೀಪ್ ಈತನನ್ನು ಹಿಂದೆ ಕೂಡಿಸಿಕೊಂಡು ಈ ಕಡೆ ಅಂಬೇಡ್ಕರ್ ನಗರದ ಕಡೆ ಹೋರಟಿದ್ದೆ. ನನಗೂ ಸಹ ಸಣ್ಣ ಪುಟ್ಟ ಗಾಯ ಆಗಿವೆ ಅಂದರೆ ಸರಿ. ನಾನು ಲಕ್ಷ್ಮೀ ಥಿಯೇಟರಿನಿಂದ ಬರುವಾಗ ಫುಲ್ ಪಾಯಿಂಟ್ ಬೇಕರಿ ಮುಂದುಗಡೆ ತಗ್ಗುನಲ್ಲಿ ಬಿದ್ದು ನನಗೂ ಗಾಯ ಆಗಿದ್ದವು. ಜೋರಾಗಿ ಬಂದು ಅಲ್ಲಿ ನಿಂತಿದ್ದ ನೀಲಕಂಠಪ್ಪನಿಗೆ ಡಿಕ್ಕಿ ಪಡಿಸಿ ಆತನ ಸಾವಿಗೆ ಕಾರಣನಾದೆ ಅಂದರೆ ಸರಿಯಲ್ಲ. ಅಪಘಾತ ಸ್ಥಳ ಚೆಕ್ಬಂಧಿ ಹೇಳಲು ಬರುವುದಿಲ್ಲ, ಏಕೆಂದರೆ ಆ ಸ್ಥಳ ನನಗೆ ಗೊತ್ತಿಲ್ಲ.

3. ಆ ಕಾಲಕ್ಕೆ ನನ್ನದು ಚಾಲನ ಪ್ರಮಾಣ ಪತ್ರ ಇರಲಿಲ್ಲ ಅಂದರೆ ಸರಿ. ಈಗಲೂ ನಾನು ಡಿ.ಎಲ್ ಮಾಡಿಸಿಲ್ಲ. ದಿಃ12-08-2020 ರಂದು ರಾತ್ರಿ 8-30 ಗಂಟೆಗೆ ಅಪಘಾತ ಆಗಿದೆ ಅಂದರೆ ಗೊತ್ತಿಲ್ಲ. ನೀಲಕಂಠಪ್ಪ ತಲೆ, ಕೈ, ಕಾಲು ಗಾಯ ಆಗಿ ಚಿಕಿತ್ಸೆ ಫಲಿಸದೇ ಮರಣ ಹೊಂದಿದ ಅಂದರೆ ಗೊತ್ತಿಲ್ಲ. ಅದೇ ರೀತಿ ವೈದ್ಯರ ವರದಿ ಇದೆ ಅಂದರೆ ಗೊತ್ತಿಲ್ಲ. ನಿಪಿ-4 ಪಿ.ಎಂ ವರದಿ ಪ್ರಕಾರ ನೀಲಕಂಠಪ್ಪನ ಸಾವು " Death is due to respiratory failure consequent of injuries sustained with Covid 19 positive status" ಆಗಿದೆ ಅಂದರೆ ಗೊತ್ತಿಲ್ಲ.

4. ದಿಃ13-08-2020 ರಿಂದ ದಿಃ20-08-2020 ರವರೆಗೆ ನೀಲಕಂಠಪ್ಪ ಹುಬ್ಬಳ್ಳಿ ತತ್ವದರ್ಶಿನಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದ ಅಂದರೆ ಗೊತ್ತಿಲ್ಲ. ಅಪಘಾತದಲ್ಲಿ ಆದ ಗಾಯಗಳಿಂದ ಚಿಕಿತ್ಸೆ ಫಲಕಾರಿಯಾಗದೆ ಆತ ಮರಣ ಹೊಂದಿದ ಅಂದರೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲಾ.**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಹಿರಿಯ ವ್ಯವಹಾರ ನ್ಯಾಯಾಧೀಶರು, ಕೊಪ್ಪಳ.**